ಪ್ರಾಣಿಗಳಂತೆ ಆಕ್ರಂದನಗೈಯುತ್ತಿರುವ ಎರಡು ಜೀವಗಳು. ಯಾವುದೇ ತಪ್ಪಿಲ್ಲದ ಅವರನ್ನು ಸಂತೈಸುವ ಒಂದು ಜೀವವೂ ಇರಲಿಲ್ಲ. ತಮ್ಮ ಯಾವುದೇ ತಪ್ಪಿಲ್ಲದಿದ್ದರೂ ಇಡೀ ವಿಶ್ವದ ಎಲ್ಲಾ ಅಧಿಕಾರದಿಂದ ಬೇಟೆಯಾಡಲ್ಪಡುತ್ತಿದ್ದ ಅವರಿಬ್ಬರ ಬಿಕ್ಕಳಿಕೆಯನ್ನು ಯಾವ ಇತಿಹಾಸವೂ ದಾಖಲಿಸುತ್ತಿರಲಿಲ್ಲ. ರೆಹಮತ್ ಮಮ್ಮಲ ಮರುಗಿದಳು. ಅನೀಸ್ ಮತ್ತವನ ತಂದೆ ತಾಯಿಯರು ಅವಳ ಅಸ್ತಿತ್ವವನ್ನು ಆಕ್ರಮಿಸಿಕೊಂಡು ಬಿಟ್ಟಿದ್ದರು. ಅವರ ದುಃಖ ಅವಳ ಸ್ವಂತ ದುಃಖವಾಗಿತ್ತು.

ರೆಹಮತ್‌ಳ ಎದೆ ಅಸಹಾಯಕ ನೋವಿನಿಂದ ವಿಲಪಿಸುತ್ತಿತ್ತು. ಅನೀಸ್‌ನಿಂದ ಆಗಿರುವ ಅನಾಹುತ ನಯಾಜ್‌ನಿಂದಲೂ ಆಗಬಹುದಲ್ಲವೇ? ನಯಾಜ್ ದಿಗಂತದೆಡೆಗೆ ಹಾರಲು ರೆಕ್ಕೆಗಳನ್ನು ಪಟಪಟನೆ ಬಡಿಯುತ್ತಿದ್ದ. ಅವನು ಎಂಬಿಎ ಮಾಡಲು ಪ್ರಪಂಚದ ಅನೇಕ ವಿಶ್ವ ವಿದ್ಯಾಲಯಗಳಿಗೆ ಅರ್ಜಿ ಗುಜರಾಯಿಸಿದ್ದ. ತಾನು ಕಾಣದ ಅನೀಸ್‌ನ ದುರಂತದಲ್ಲಿ ಅವಳಿಗೆ ನಯಾಜ್‌ನ ಮುಖವೂ ಕೂಡಾ ಕಾಣತೊಡಗಿತ್ತು. ಅಥವಾ ಇದೀಗ ತಾನೇ ಅಳಿಯನಾಗಿರುವ ಫಹದ್‌ನ ಬೇರುಗಳು ಎಲ್ಲೆಲ್ಲಿ ಹರಡಿವೆಯೋ ಅಥವಾ ಲಂಡನ್‌ನಲ್ಲಿರುವ ತನ್ನ ಅಕ್ಕನ ಮಗ, ವಾಷಿಂಗ್ಟನ್‌ನಲ್ಲಿರುವ ತನ್ನ ಭಾವನ ಮಗ, ಖತಾರ್‌ನಲ್ಲಿರುವ ತನ್ನ ಸೋದರತ್ತೆಯ ಅಳಿಯ... ಹೀಗೆಯೇ ಅವಳ ಪಟ್ಟಿ ಬೆಳೆಯುತ್ತಾ ಹೋಯಿತು. ಅನೀಸ್‌ನೊಡನೆ ತನ್ನ ಹತ್ತಿರದ ಕುಟುಂಬದ ಅನೇಕ ಯುವಜನರ ಮುಖಗಳು ಮೇಲೆ ಕೆಳಗೆ ಆಗುತ್ತಾ ವಿಚಿತ್ರ ರೀತಿಯಲ್ಲಿ ಸಂಯೋಜನೆಗೊಂಡು ಎಲ್ಲರ ಮುಖಗಳೂ ಕೂಡಾ ಅನೀಸ್‌ನೊಡನೆ ತಳಕು ಹಾಕಿಕೊಂಡು ಅವರೆಲ್ಲರ ಮನೆಗಳೆದುರು ಟೀವಿ ಕ್ಯಾಮೆರಾಗಳು, ಪೊಲೀಸ್ ಜೀಪುಗಳು... ಟೆರರಿಸ್ಟ್... ಟೆರರಿಸ್ಟ್... ಅವಳು ಬೆಚ್ಚಿ ಬೆದರಿ ಕಣ್ಣು ತೆರೆದಳು. ಇಡೀ ರಾತ್ರೆ ಅವಳು, ಅರೆ ನಿದ್ರೆ ಅರೆ ಜಾಗೃತಾವಸ್ಥೆಯಲ್ಲಿ ಕಳೆದಳು. ಕೊನೆಗೆ ಬೆಳಗಿನ ಜಾವ ಶರೀಫ್ ನಮಾಜ್‌ಗೆ ಎಂದು ಎದ್ದಾಗ ಅವಳಿಗೆ ಕೆಂಡದಂತ ಜ್ವರ ಸುಡತೊಡಗಿತು.

ಜ್ವರದಿಂದ ಮುಕ್ತಿ ಹೊಂದಲು ಸುಮಾರು ಒಂದು ತಿಂಗಳೇ ಬೇಕಾಯಿತು. ನವ ವಿವಾಹಿತೆಯಾಗಿದ್ದ ಅಜ್ರಾಳೇ ಮೂರು ದಿನಗಳವರೆಗೆ ಮನೆಯ ಕೆಲಸ ಕಾರ್ಯಗಳನ್ನು ನಿರ್ವಹಿಸಿದಳು. ಕೊನೆಗೂ ನಾಲ್ಕನೇ ದಿನ ಅನಿವಾರ್ಯವಾಗಿ ಗಂಡನ ಮನೆಗೆ ಹೋಗಬೇಕಾದಾಗ ಜ್ವರದಿಂದ ಕಣ್ಣು ಬಿಡದೆ ಮಲಗಿದ್ದ ತಾಯಿಯ ಕೈಯನ್ನು ಎದೆಗವಚಿಕೊಂಡು ಕಣ್ಣೀರು ಹರಿಸುತ್ತಾ ಗಂಡನೊಡನೆ ಹೋದಳು. ರೆಹಮತ್‌ಳ ಆ ಕಾಯಿಲೆಯಲ್ಲಿ ಔಷಧೋಪಚಾರದ ಪಾತ್ರ ಎಷ್ಟಿತ್ತೋ, ಅದಕ್ಕಿಂತಲೂ ಹೆಚ್ಚಿನ ಪಾತ್ರ ನಯಾಜ್‌ನ ಸೇವೆಯದಾಗಿತ್ತು. ಹಗಲಿರುಳೆನ್ನದೆ ತಾಯಿಯ ಸೇವೆಗೆ ನಿಂತ ನಯಾಜ್ ಅವಳನ್ನು ಮಗುವಿನಂತೆ ನೋಡಿಕೊಂಡ. ಯಾವಾಗ ಕಣ್ಣು ಬಿಟ್ಟರೂ ಅವನು ಅವಳ ಹಾಸಿಗೆಯ ಸುತ್ತಲೇ ಇರುತ್ತಿದ್ದ. ಕಣ್ಣು ಮುಚ್ಚಿದರೂ ಅವನ ಕೈ ಅವಳ ಕೈಯ್ಯಲ್ಲಿರುತ್ತಿತ್ತು. ಅವನ ಸ್ಪರ್ಶ ಮತ್ತು ಇರುವಿಕೆಯೇ ಅವಳಿಗೆ ಸಂಜೀವಿನಿಯಾಗಿತ್ತು. ವೈದ್ಯರು ಹಲವಾರು ಪರೀಕ್ಷೆಗಳನ್ನು ಮಾಡಿದರು. ಏನೂ ಕಾಯಿಲೆಯಿಲ್ಲ ಎಂದರು. ಯಾವುದೋ ಗುಳಿಗೆಯನ್ನು ಕೊಟ್ಟರು. ಆದರೆ, ಅವಳ ಮನದಾಳದ ಭೀತಿಯನ್ನು, ಆತಂಕವನ್ನು ಯಾರೂ ಪರೀಕ್ಷಿಸಲಿಲ್ಲ ಮತ್ತು ಗುರುತಿಸಲಿಲ್ಲ. ಈ ನಡುವೆ ನಯಾಜ್ ಬೇರೆ ಬೇರೆ ಕಾಲೇಜುಗಳಿಗೆ ಸಲ್ಲಿಸಿದ್ದ ಅರ್ಜಿಯಲ್ಲಿ ಪ್ರವೇಶಾಹ್ವಾನ ಬಂದರೂ ಕೂಡಾ ಅವನು ನಿರಾಕರಿಸಿದ್ದ. ಅಂತೂ ಇಂತೂ ತೀವ್ರ ನಿಶ್ಶಕ್ತಿ ಇದ್ದರೂ ಗುಣಮುಖಳಾಗಿ ರೆಹಮತ್ ಆಸ್ಪತ್ರೆಯಿಂದ ಹಿಂದಿರುಗಿದ್ದಳು. ಮೇಲ್ನೋಟಕ್ಕೆ